ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

10

ಇಲಾಖೆ / ವಿಷಯ : DEPARTMENT / SUBJECT: ಗೃಹ - ಡ್ರಗ್ಸ್ ಮಾಫಿಯಾ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE : 2/9/2020

# ಡ್ರಗ್ಸ್ ನಿಯಂತ್ರಣಕ್ಕೆ 2012ರಲ್ಲೇ ಯತ್ನ

## ಮಾಜಿ ಶಾಸಕ ಯೋಗೀಶ್ ಭಟ್‌ರ ವರದಿಗೆ ಸರ್ಕಾರದಿಂದ ಮರುಜೀವ

■ ಶಂಕರ ಪಾಗೋಜಿ

ಬೆಂಗಳೂರು: ಸ್ಯಾಂಡಲ್‌ವುಡ್‌ನಲ್ಲಿ ಆತಂಕ ಸೃಷ್ಟಿಸಿರುವ ಡ್ರಗ್ಸ್ ಮಾರಾಟ ಜಾಲದ ಕುರಿತಂತೆ 8 ವರ್ಷಗಳ ಹಿಂದೆಯೇ ವಿಧಾನಸಭೆಯ ಅರ್ಜಿಗಳ ಸಮಿತಿ ವಿಸ್ತೃತ ಅಧ್ಯಯನ ನಡೆಸಿ ಪ್ರಬಲ ಕಾನೂನು ಜಾರಿ ಸೇರಿದಂತೆ ಸುಮಾರು 18 ಶಿಫಾರಸುಗಳನ್ನು ಮಾಡಿರುವ ವರದಿ ಈಗ ಮತ್ತೆ ಮುನ್ನೆಲೆಗೆ ಬಂದಿದೆ.

ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಯೋಗೀಶ್ ಭಟ್ಟರ ವರದಿಯ ಕುರಿತು ಚರ್ಚೆ ನಡೆಸಲಾಗಿದೆ. ಶಿಫಾರಸುಗಳನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಲು ಗೃಹ ಸಚಿವರು ನಿರ್ದೇಶನ ನೀಡಿದ್ದಾರೆ ಎನ್ನಲಾಗಿದೆ.

▶ 5ನೇ ಪುಟಕ್ಕೆ



ಮಾದಕ ದ್ರವ್ಯ ಜಾಲವನ್ನು ಸಂಪೂರ್ಣವಾಗಿ ಮಟ್ಟ ಹಾಕುವುದಾಗಿ ಗೃಹ ಸಚಿವ ಬೊಮ್ಮಾಯಿ ಅವರ ಹೇಳಿಕೆಯನ್ನು ನಾನು ಸ್ವಾಗತಿಸುತ್ತೇನೆ. ಈ ನಿಟ್ಟಿನಲ್ಲಿ ಸರ್ಕಾರ ನಿರ್ಣಾಯಕ ಹೆಜ್ಜೆಗಳನ್ನು ಇರಿಸಬೇಕು.

• ಎನ್. ಯೋಗೀಶ್ ಭಟ್, ಮಾಜಿ ಶಾಸಕ

### ಅರ್ಜಿಗಳ ಸಮಿತಿ ನೀಡಿದ್ದ ಹದಿನೆಂಟು ಶಿಫಾರಸುಗಳು

- ಸರ್ಕಾರ ಮಾದಕ ವಸ್ತುಗಳ ಬಳಕೆ ಹಾಗೂ ಅದರ ದುರುಪಯೋಗ ಪ್ರವೃತ್ತಿ ಬಗ್ಗೆ ಸಮಗ್ರ ಮಾಹಿತಿ ಪಡೆದುಕೊಳ್ಳಬೇಕು. ಅದರ ಆಧಾರದ ಮೇಲೆ ಮಾದಕ ವ್ಯಸನಿಗಳ ಪ್ರಮಾಣ ಮತ್ತು ಪೊಲೀಸರು ಪ್ರಕರಣ ದಾಖಲಿಸುವ ಪ್ರಮಾಣದ ಮೇಲೆ ಸೂಕ್ತ ಕ್ರಮಕೈಗೊಳ್ಳಲು ಸಾಧ್ಯವಾಗುತ್ತದೆ.
- **ಮಾದಕ ವಸ್ತು ವ್ಯಸನಿಗಳ ಪುನರ್ವಸತಿಗೆ ಸೂಕ್ತ ನೀತಿ ನಿರ್ಧಾರ ರೂಪಿಸಬೇಕು.**
- ಮಾದಕ ವ್ಯಸನಿಗಳಲ್ಲಿ ಕೀಳರಿಮೆ ತಪ್ಪಿಸಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ರಾಜ್ಯಾದ್ಯಂತ ವಿಶಿಷ್ಟ ಯೋಜನೆ ರೂಪಿಸಬೇಕು.
- **ಮಾದಕ ವ್ಯಸನಿಗಳ ಚಿಕಿತ್ಸೆಗೆ ಎಲ್ಲ ಸೌಕರ್ಯಗಳನ್ನು ಒಳಗೊಂಡ ಕೇಂದ್ರಗಳನ್ನು ಪ್ರಮುಖ ಸ್ಥಳಗಳಲ್ಲಿ ಪ್ರಾರಂಭಿಸಬೇಕು.**
- ಡ್ರಗ್ಸ್ ಮಾರಾಟ ಜಾಲ ತಡೆಯಲು ಕಠಿಣ ಕಾನೂನು ರೂಪಿಸಬೇಕು.
- **ಸರ್ಕಾರ ನ್ಯಾಯಾಲಯದಲ್ಲಿ ಸೂಕ್ತ ದಾಖಲೆಗಳೊಂದಿಗೆ ಹೋರಾಟ ಮಾಡಬೇಕು.**
- ಡ್ರಗ್ಸ್ ಮಾರಾಟ ಜಾಲ ತಡೆಗೆ ಹಾಗೂ ಶೀಘ್ರ ಇತ್ಯರ್ಥಕ್ಕೆ ಪ್ರತ್ಯೇಕ ನ್ಯಾಯಾಲಯ ಸ್ಥಾಪನೆ ಮಾಡಬೇಕು.
- **ಐಟಿ -ಬಿಟಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಯುವಕ-ಯುವತಿಯರು ಕೆಲಸದ ಒತ್ತಡದಿಂದ ಮಾದಕ ವ್ಯಸನಿಗಳಾಗುತ್ತಿದ್ದಾರೆ. ಇವರಿಗೆ ಮಾನಸಿಕ ಒತ್ತಡದ ಕುರಿತು ಸೂಕ್ತ ತರಬೇತಿ ನೀಡುವಂತೆ ಐಟಿ ಬಿಟಿ ಕಂಪನಿಗಳಿಗೆ ಸರ್ಕಾರ ನಿರ್ದೇಶನ ನೀಡಬೇಕು.**
- ಕನಿಷ್ಠ 250 ಗ್ರಾಂ.ಗಿಂತ ಹೆಚ್ಚು ಮಾದಕ ವಸ್ತು ಹೊಂದಿದ್ದರೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅವಕಾಶವಿದೆ. ಆದರೆ, ಮಾದಕ ವಸ್ತು ಮಾರಾಟಗಾರರು ಶಾಲಾ, ಕಾಲೇಜುಗಳಲ್ಲಿ ಚಿಲ್ಲರೆಯಾಗಿ ಮಾರಾಟ ಮಾಡುವುದರಿಂದ ಅವರನ್ನು ಪತ್ತೆ ಹಚ್ಚಿದರೂ ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳಲು ಈಗಿರುವ ಕಾನೂನಿನಲ್ಲಿ ಅವಕಾಶವಿಲ್ಲ. ಹೀಗಾಗಿ, ಕನಿಷ್ಠ 250 ಗ್ರಾಂ. ಎನ್ನುವ ಮಾನದಂಡವನ್ನು ಕನಿಷ್ಠ 10 ಗ್ರಾಂ.ಗೆ ಪರಿಗಣಿಸಬೇಕು.

▶ 5ನೇ ಪುಟಕ್ಕೆ

# ಡ್ರಗ್ಸ್ ನಿಯಂತ್ರಣಕ್ಕೆ 2012ರಲ್ಲೇ ಯತ್ನ

**1ನೇ ಪುಟದಿಂದ** ▶ ಯೋಗೇಶ್ ಭಟ್ ವರದಿ ಸಲ್ಲಿಕೆಯಾದ ನಂತರ ರಾಜ್ಯದ ಮೂರು ಪ್ರಮುಖ ಪಕ್ಷಗಳು ಅಧಿಕಾರ ನಡೆಸಿದ್ದರೂ, ಈ ವರದಿಯ ಶಿಫಾರಸುಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಈಗ ಮತ್ತೆ ಡ್ರಗ್ಸ್ ಮಾರಾಟ ಜಾಲದ ಕರಾಳ ಮುಖ ಸ್ಫೋಟಗೊಂಡಿದ್ದು, ರಾಜ್ಯ ಸರ್ಕಾರ ವಿಧಾನಸಭೆಯ ಉಪ ಸಭಾಧ್ಯಕ್ಷರಾಗಿದ್ದ ಯೋಗೀಶ್ ಭಟ್ಟರ ಸಮಿತಿ ವರದಿ ಧೂಳು ಸೇವರಿಸಿ ಚರ್ಚೆ ನಡೆಸಲು ಮುಂದಾಗಿದೆ.

**ವರದಿಯಲ್ಲೇನಿದೆ:** 2012ರಲ್ಲಿ ಮಂಗಳೂರಿನಲ್ಲಿ ಡ್ರಗ್ಸ್ ಮಾರಾಟ ಜಾಲ ಅವ್ಯಾಹತವಾಗಿತ್ತು. ಇದನ್ನು ತಡೆಯಲು ಪಾಲಕರು, ಪೋಷಕರು ವಿಧಾನಸಭೆಯ ಅರ್ಜಿಗಳ ಸಮಿತಿಗೆ ದೂರು ಸಲ್ಲಿಸಿದ್ದರು. ಇದರ ಅನ್ವಯ ಯೋಗೀಶ್ ಭಟ್ಟರ ಅಧ್ಯಕ್ಷತೆಯ ಸಮಿತಿ 8 ತಿಂಗಳು ಅಧ್ಯಯನ ಮಾಡಿ 18 ಶಿಫಾರಸುಗಳನ್ನು ನೀಡಿತ್ತು. ಅಂದ...

### ಶಿಫಾರಸುಗಳು

- ಮಾದಕ ವಸ್ತುಗಳ ನಿಯಂತ್ರಣದಲ್ಲಿ ರಾಸಾಯನಿಕಗಳ ವಿಶ್ಲೇಷಣೆ ಅತ್ಯಂತ ಮುಖ್ಯವಾಗಿದ್ದು ಅದನ್ನು ಪತ್ತೆ ಹಚ್ಚಲು ವಿಧಿ ವಿಜ್ಞಾನ ಪ್ರಯೋಗಾಲಯಗಳನ್ನು ಬಲಗೊಳಿಸಿ ಸೂಕ್ತ ವಿದ್ಯಾರ್ಹತೆ ಹೊಂದಿರುವ ಅರ್ಹರನ್ನು ನೇಮಿಸಲು ಕ್ರಮ ಕೈಗೊಳ್ಳಬೇಕು.
- ಮಾದಕ ವಸ್ತು ಸೇವನೆಗೆ ಅಗತ್ಯವಿರುವ ಉಪಕರಣಗಳ ಖರೀದಿಗೆ ವೈದ್ಯರ ಶಿಫಾರಸಿಲ್ಲದೇ ಮಾರಾಟ ಮಾಡಲು ಅವಕಾಶ ಕಲ್ಪಿಸಬಾರದು.
- ಪ್ರಮುಖವಾಗಿ ಮಾದಕ ದ್ರವ್ಯ ಮಾರಾಟ ಜಾಲದಲ್ಲಿ ಪೊಲೀಸ್ ಇಲಾಖೆಯ ಸಿಬ್ಬಂದಿ ಭಾಗಿಯಾಗಿರುವ ಸಾಧ್ಯತೆ ಇದೆ. ಅಕ್ರಮ ಮಾರಾಟ ಜಾಲ ಪತ್ತೆ ಹಚ್ಚುವಲ್ಲಿ ಪೊಲೀಸ್ ಇಲಾಖೆಯ ಕಾರ್ಯ ಸಾಕಾಗುತ್ತಿಲ್ಲ.
- ಮಾದಕದ್ರವ್ಯ ನಿಯಂತ್ರಣ ಘಟಕ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಡ್ರಗ್ ಮಾಫಿಯಾ ಚಟುವಟಿಕೆ ನಿರ್ಮೂಲನೆ ಮಾಡುವ ಮಾಹಿತಿ ಕಲೆ ಹಾಕಿ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಲು ದಕ್ಷ ಮತ್ತು ಸಮರ್ಥ ಅಧಿಕಾರಿಗಳ ನೇಮಕ ಮಾಡಬೇಕು.